ಇಂದು ದಿನಾಂಕ 30-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಜಿ.ಜಿ.ಜಿ. ವಕೀಲರಿಂದಃ**

ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ . ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ವಕೀಲರು ಕೊಟ್ಟಿರುತ್ತಾರೆ. ದಾವೆಗೆ ಹಾಜರಾಗಬೇಕೆಂದು ವಕೀಲರು ಹೇಳಿರುತ್ತಾರೆ ಎಂದರೆ ಸರಿಯಲ್ಲ . ವಕೀಲರು ಪ್ರೂಫ್‌ನ್ನು ತೋರಿಸು ಎಂದು ಹೇಳಿರುತ್ತಾರೆ . ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರು ಯಾವ ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ನಾನು ನೋಡಿ ತಿಳಿದುಕೊಂಡಿಲ್ಲ. ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ . ನಾನು ಕತಗಾಲ್‌ನಲ್ಲಿ ಹುಟ್ಟಿರುತ್ತೇನೆ. 1991 ರಲ್ಲಿ ಹುಟ್ಟಿರಬಹುದು. ನಾನು ಶಾಲೆಗೆ 1997-98 ರಲ್ಲಿ ಹೋಗಿರುತ್ತೇನೆ. ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಕತಗಾಲ್‌ನಲ್ಲಿ ಓದಿರುತ್ತೇನೆ. ನಂತರ ಅಲ್ಲಿಂದ ಸಂತೆಗುಳಿ ಶಾಲೆಗೆ ಹೋಗಿರುತ್ತೇನೆ . ಸಂತೆಗುಳಿ ಶಾಲೆಯಲ್ಲಿ 5 ನೇ ಕ್ಲಾಸ್‌ನಿಂದ ಓದಿರುತ್ತೇನೆ. ಸಂತೆಗುಳಿ ಶಾಲೆಯಲ್ಲಿ ಒಂದು ವರ್ಷ ಓದಿರುತ್ತೇನೆ. ಅದರ ನಂತರ ಮತ್ತೇ ಕತಗಾಲ್ ಶಾಲೆಗೆ ಬಂದಿರುತ್ತೇನೆ. ನಂತರ ಕತಗಾಲ್‌ನಲ್ಲಿ 8 ನೇ ತರಗತಿವರೆಗೂ ಓದಿರುತ್ತೇನೆ.

ನನ್ನ ಮದುವೆ ಕತಗಾಲ್‌ನಲ್ಲಿ ನಡೆದಿರುತ್ತದೆ. ನನ್ನ ಮದುವೆ 2014 ರಲ್ಲಿ ನಡೆದಿರುತ್ತದೆ. ಮದುವೆಯಾದ ನಂತರ ನಾನು ಶಿರಸಿಯಲ್ಲಿ ವಾಸ್ತವ್ಯ ಮಾಡಿಕೊಂಡಿರುತ್ತೇನೆ . ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳು ವಾಸವಾಗಿದ್ದೇವೆ. ನಾನು ಹಾಜರುಪಡಿಸಿದ ದಾಖಲಾತಿಗಳಲ್ಲಿ ನನ್ನ ತಂದೆ ಅಕ್ಬರ್ ಶೇಖ್ ಎಂದು ತೋರಿಸಲು ದಾಖಲಾತಿ ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಮುಸ್ಲಿಂ ಜನಾಂಗದಲ್ಲಿ ಮೊಹಮ್ಮದ್ , ಅಕ್ಬರ್, ಇಕ್ಬಾಲ್ ಎಂಬ ಸುಮಾರು ಹೆಸರಿನವರು ಇದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಗಂಡ - ಅಕ್ಬರ್ ಇವರೇ ನನ್ನ ತಂದೆ ಎಂದು ತೋರಿಸಲು ವೋಟರ್ ಐ.ಡಿ.

ಹಾಜರುಪಡಿಸಿದ್ದೇನೆ. ನನ್ನ ತಾಯಿಯ ಹೆಸರು ಸಾಯಿರಾಭಾನು ಅಕ್ಬರ್ ಶೇಖ್ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಎಷ್ಟು ಹಾಜರುಪಡಿಸಿದ್ದೇನೋ ಅಷ್ಟೇ ಎಂದು ಹೇಳಿರುತ್ತಾರೆ. ನನ್ನ ಜನನ ಪ್ರಮಾಣಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಅಕ್ಬರ್ ಶೇಖ್ ಹಾಗೂ ಸಾಯಿರಾಭಾನು ಇವರಿಗೆ ಹುಟ್ಟಿದ ಮಗ ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳ ಜನನ ಪ್ರಮಾಣಪತ್ರವನ್ನು ಮಾಡಿಸಿದ್ದೇನೆ. ನನ್ನ ಮಕ್ಕಳು ಶಿರಸಿಯಲ್ಲಿ ಹುಟ್ಟಿರುತ್ತಾರೆ. ಅವರನ್ನು ಶಾಲೆಗೆ ಸೇರಿಸುವಾಗ ಶಿರಸಿಯಿಂದ ಅವರ ಜನನ ಪ್ರಮಾಣಪತ್ರವನ್ನು ಪಡೆದುಕೊಂಡು ಶಾಲೆಗೆ ಸೇರಿಸಿದ್ದೇನೆ ಎಂದರೆ ಸರಿ . ಕತಗಾಲ್ ಅಧಿಕಾರಿಗಳಿಂದ ನನ್ನ ಜನನ ಪ್ರಮಾಣಪತ್ರವನ್ನು ಪಡೆದುಕೊಂಡು ಹಾಜರುಪಡಿಸಲು ತೊಂದರೆ ಇಲ್ಲ.

ಈ ದಾವೆ ನಡೆಯುವ ಮೊದಲು ಕಾರವಾರ ನ್ಯಾಯಾಲಯದಲ್ಲಿ ಮೂಲ ದಾವಾ ಸಂಖ್ಯೆ 39/2022 ದಾಖಲಿಸಿದ ಬಗ್ಗೆ ನನಗೆ ಗೊತ್ತು. ಅದು ಯಾವ ನ್ಯಾಯಾಲಯದಲ್ಲಿ ನಡೆದಿತ್ತು ಗೊತ್ತಿಲ್ಲ. ಆ ದಾವೆಯಲ್ಲಿ ನಾನು ಸಾಯಿರಾಭಾನು ಹಾಗೂ ಅಕ್ಬರ್ ಶೇಖ್ ಇವರ ಮಗ , ಕಾರಣ ನನಗೂ ಒಂದು ಪಾಲು ಕೊಡಿ ಎಂದು ಆ ಪ್ರಕರಣದಲ್ಲಿ ಕೇಳಲು ತೊಂದರೆ ಇರಲಿಲ್ಲ . ನಾನು ಅಕ್ಬರ್ ಶೇಖ್ ಹಾಗೂ ಸಾಯಿರಾಭಾನುರವರ ಮಗ ಅಲ್ಲ, ಆ ಕಾರಣ ನಾನು ಮೂಲ ದಾವಾ ಸಂಖ್ಯೆ 39/2022 ರಲ್ಲಿ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ಮೊಹಮ್ಮದ್ ಖಾಸಿಂ ಶೇಖ್ ಅವರ ಹೆಂಡತಿ ರಜಿಯಾ ಬಿ ಮೊಹಮ್ಮದ್ ಶೇಖ್ ಅವರು ಈಗ ಜೀವಂತ ಇಲ್ಲ. ಅವರಿಗೆ ಸಂಬಂಧಪಟ್ಟಂತಹ ಚಿನ್ನಾಭರಣಗಳನ್ನು ವಾದಿ ಹಾಗೂ ಪ್ರತಿವಾದಿಯರು ಹಂಚಿಕೊಂಡಿದ್ದಾರೆ , ಆ ಬಗ್ಗೆ ನನಗೆ ಗೊತ್ತಿಲ್ಲ .ನಾನು ಅದಕ್ಕೆ ಸಂಬಂಧಪಟ್ಟಂತೆ ಚಿನ್ನಾಭರಣಗಳನ್ನು ನನಗೆ ಕೊಡಿ ಎಂದು ವಾದಿ ಹಾಗೂ ಪ್ರತಿವಾದಿಯರ ಬಳಿ ಕೇಳಿಲ್ಲ. ಮೊಹಮ್ಮದ್ ಖಾಸಿಂ ಶೇಖ್ ಅವರ ಹೆಂಡತಿ ರಜಿಯಾ ಬಿ ಮೊಹಮ್ಮದ್ ಶೇಖ್ ತೀರಿಕೊಂಡ

ನಂತರ 1 ನೇ ಪ್ರತಿವಾದಿ ತಹಶೀಲ್ದಾರರಿಂದ ದಿನಾಂಕ 17-08-2022 ರಂದು ಒಂದು ವಂಶಾವಳಿಯನ್ನು ಮಾಡಿಸಿದ್ದರು ಎಂದರೆ ಗೊತ್ತಿಲ್ಲ. ನಾನು ಶಿರಸಿ ತಹಶೀಲ್ದಾರರಿಂದ ಅಥವಾ ಕುಮಟಾ ತಹಶೀಲ್ದಾರರಿಂದ ವಂಶಾವಳಿಯನ್ನು ಪಡೆದುಕೊಂಡು ಹಾಜರು ಮಾಡಲು ಪ್ರಯತ್ನಪಟ್ಟಿಲ್ಲ . ನಾನು ಅಕ್ಬರ್ ಖಾಸಿಂ ಶೇಖ್ ಹಾಗೂ ಸಾಯಿರಾಭಾನು ಅಕ್ಬರ್ ಶೇಖ್ ಇವರ ಮಗ ಅಲ್ಲ, ಆ ಕಾರಣ ನಾನು ಯಾವುದೇ ದಾಖಲಾತಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 1 ರಿಂದ 4 ನೇ ಪ್ರತಿವಾದಿಯರ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ